# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** ದಿನಾಂಕ:27.04.2020

**ಪೂಜ್ಯ ಮಹಾಪೌರರು ರವರಿಂದ ಉಚಿತ ತಪಾಸಣೆ ನಡೆಸುವ ಸಂಚಾರಿ ತಪಾಸಣಾ ವಾಹಗಳಿಗೆ ಚಾಲನೆ:**




ಕೋವಿಡ್-19 ಹಿನ್ನೆಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಆರೋಗ್ಯ ತಪಾಸಣೆ ನಡೆಸಲು ಭಾರತೀಯ ಜೈನ್ ಸಂಘಟನ್, ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಶನ್, ಜಿತೋ ಸಂಘಟನೆಗಳು ಪಾಲಿಕೆ ಸಹಕಾರದೊಂದಿಗೆ 11 ಸಂಚಾರಿ ತಪಾಸಣಾ ವಾಹನಗಳನ್ನು ವ್ಯವಸ್ಥೆ ಮಾಡಿದ್ದು, ಇಂದು ಪಾಲಿಕೆ ಕೇಂದ್ರ ಕಛೇರಿ ಆವರಣದಲ್ಲಿ ಪೂಜ್ಯ ಮಹಾಪೌರರು ಚಾಲನೆ ನೀಡಿದರು. ಈ ವೇಳೆ ಮಾನ್ಯ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜೇಂದ್ರ, ಮುಖ್ಯ ಆರೋಗ್ಯಾಧಿಕಾರಿ(ಕ್ಲಿನಿಕಲ್) ಡಾ. ನಿರ್ಮಲಾ ಬುಗ್ಗಿ, ಭಾರತೀಯ ಜೈನ್ ಸಂಘಟನ್‌ನ ಬೆಂಗಳುರು ಅಧ್ಯಕ್ಷರು ವಿನೋದ್ ಪೋರ್ವಾಲ್, ಉಪಾಧ್ಯಕ್ಷರು ಸುರೇಶ್ ಧೋಕ ಹಾಗೂ ಇತರರು ಉಪಸ್ಥಿತರಿದ್ದರು.

ಕೋವಿಡ್-19 ತಡೆಗಟ್ಟುವ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಈಗಾಗಲೇ ಹಲಾವರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ತಪಾಸಣೆ ನಡೆಸುವ ಉದ್ದೇಶದಿಂದ ಈಗಾಗಲೇ ಪಾಲಿಕೆ ವತಿಯಿಂದ 7 ಸಂಚಾರಿ ತಪಾಸಣಾ ವಾಹನಗಳನ್ನು ನಿಯೋಜಿಸಲಾಗಿದೆ. ಅದಲ್ಲದೆ ಹಲವಾರು ಸಂಘ-ಸಂಸ್ಥೆಗಳು ಸೇವಾ ಮನೋಭಾವದಿಂದ ಮುಂದೆ ಬಂದು ಹಲವಾರು ಸೇವೆಗಳನ್ನು ಮಾಡುತ್ತಿವೆ. ಇದೀಗ ಭಾರತೀಯ ಜೈನ್ ಸಂಘಟನ್ ಪಾಲಿಕೆ ಸಹಯೋಗದೊಂದಿಗೆ 11 ಸಂಚಾರಿ ತಪಾಸಣಾ ವಾಹನಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದು ಪೂಜ್ಯ ಮಹಾಪೌರರು ತಿಳಿಸಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಮಹಾಪೌರರು, ಪಾಲಿಕೆ ವ್ಯಾಪ್ತಿಯಲ್ಲಿ ಅತ್ಯವಶ್ಯಕವಿರುವ ಪ್ರದೇಶಗಳಾದ ಕಟ್ಟಡ ಕಾರ್ಮಿಕರ ಪ್ರದೇಶ, ಕೊಳಗೇರಿ ಪ್ರದೇಶ, ಪೌರಕಾರ್ಮಿಕರ ಕಾಲೋನಿಗಳಲ್ಲಿ ತಪಾಸಣೆ ನಡೆಸಲು ವೈದ್ಯರ ತಂಡವನ್ನು ನಿಯೋಜನೆ ಮಾಡಿ, ಅದಕ್ಕಾಗಿ ಸಂಚಾರಿ ವಾಹನಗಳನ್ನು ನಿಯೋಜನೆ ಮಾಡಲಾಗಿದೆ. ಅದರಂತೆ ಭಾರತೀಯ ಜೈನ್ ಸಂಘಟನೆಯು ಲಾಕ್‌ಡೌನ್ ಮುಗಿಯುವವರೆಗೆ(ಮೇ 3ರವರೆಗೆ) ಉಚಿತವಾಗಿ ವಾಹನಗಳು ಹಾಗೂ ಅಗತ್ಯ ಔಷಧಿಗಳ ವ್ಯವಸ್ಥೆ ಕಲ್ಪಿಸಲಿದ್ದು, ಪಾಲಿಕೆ ವತಿಯಿಂದ ವೈದ್ಯರನ್ನು ನಿಯೋಜನೆ ಮಾಡಲಾಗಿದೆ. ಪ್ರತಿ ವಾಹನದಲ್ಲೂ 3 ವೈದ್ಯರು(ಸೈಕ್ರಿಯಾಟ್ರಿಸ್ಟ್, ಇಬ್ಬರು ಬೆಂಗಳೂರು ಮೆಡಿಕಲ್ ಕಾಲೇಜು ಇಂಟರ್ನಿ ವೈದ್ಯರು) ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಪಾಲಿಕೆ ವತಿಯಿಂದ ಈಗಾಗಲೇ "ಬಿಬಿಎಂಪಿ ಟೆಲಿ ಹೆಲ್ತ್" ಲೈನ್ 07447118949ಗೇ ಈಗಾಗಲೇ ಚಾಲನೆ ನೀಡಿದ್ದು, ಅದರಜೊತೆ ಈ ಸಂಚಾರಿ ತಪಾಸಣಾ ಸೇವೆಯನ್ನು ಲಿಂಕ್ ಮಾಡಿಕೊಂಡು, ಕಾರ್ಯನಿರ್ವಹಿಸಲು ಮಹಾಪೌರರು ಮುಖ್ಯ ಆರೋಗ್ಯಾಧಿಕಾರಿಗೆ ಸೂಚನೆ ನೀಡಿದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**